# ಮಾದರಿ ಪ್ರಶ್ನೆ ಪತ್ರಿಕೆ – 3

**ಸಮಯ: 3:15 ಗಂಟೆ** | **ವಿಷಯ: ಸಮಾಜ ವಿಜ್ಞಾನ** | **ಅಂಕಗಳು: 80**

**I. ಈ ಕೆಳಗಿನ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಿದ್ದು, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **1X8=8**

1. ಭಾರತದ ಮೊದಲ ಗೃಹಮಂತ್ರಿ

   ಎ) ನೆಹರು ಬಿ) ಡಾ. ರಾಜೇಂದ್ರ ಪ್ರಸಾದ್ ಸಿ) ಡಾ. ಬಿ ಆರ್ ಅಂಬೇಡ್ಕರ್ ಡಿ) ಸರ್ದಾರ್ ವಲ್ಲಭ ಭಾಯ್ ಪಟೇಲ್

2. ರಾಷ್ಟ್ರ ಸಂಘ ಸ್ಥಾಪನೆಯಾಗಲು ಕಾರಣ

   ಎ) ಜರ್ಮನಿಯನ್ನು ಹತ್ತಿಕ್ಕಲು ಬಿ) ಆರ್ಥಿಕ ನೆರವಿಗಾಗಿ ಸಿ) ಭವಿಷ್ಯದ ಯುದ್ಧಗಳನ್ನು ತಡೆಯಲು ಡಿ) ಆರ್ಥಿಕಾಭಿವೃದ್ಧಿಗಾಗಿ

3. ಭಾರತದಲ್ಲಿ ಶಿಕ್ಷಣ ಹಕ್ಕು ಕಾಯಿದೆ ಜಾರಿಗೊಂಡ ವರ್ಷ

   ಎ) 2006 ಬಿ) 2009 ಸಿ) 2010 ಡಿ) 2020

4. ಸಮಾನ ವೇತನ ಕಾಯ್ದೆಯ ಮಹತ್ವ

   ಎ) ಸಂಘಟಿತ ವಲಯದ ವೇತನ ತಾರತಮ್ಯ ನಿವಾರಣೆಗೆ ಬಿ) ಉದ್ಯೋಗ ಸೃಷ್ಟಿ

   ಸಿ) ಕಾರ್ಮಿಕ ಹಿತರಕ್ಷಣೆ ಡಿ) ಕಾರ್ಮಿಕರಿಗೆ ಸೌಲಭ್ಯ ಪೂರೈಕೆ

5. ಪರಮಾಣು ವಿದ್ಯುತ್ ಉತ್ಪಾದನೆಯಲ್ಲಿ ಬೆರಿಲಿಯಂನ ಮಹತ್ವ

   ಎ) ಶಾಖ ತಗ್ಗಿಸಲು ಬಳಕೆ ಬಿ) ಮಾಡರೇಟರ್ ಆಗಿ ಬಳಕೆ ಸಿ) ಉತ್ತಮ ವಿದ್ಯುತ್ ವಾಹಕ ಡಿ) ವಿದ್ಯುತ್ ಮಂದ ವಾಹಕ

6. ಭಾರತದ ಹೆಬ್ಬಾಗಿಲು

   ಎ) ಚೆನ್ನೈ ಬಿ) ಮಂಗಳೂರು ಸಿ) ಮುಂಬೈ ಡಿ) ದೆಹಲಿ

7. ಪರಿಸರ ಸ್ನೇಹಿ ತಂತ್ರಗಳನ್ನು ಬಳಸಿ ಕೃಷಿ ಉತ್ಪಾದನೆಯನ್ನು ದ್ವಿಗುಣಗೊಳಿಸುವುದು.

   ಎ) ಸುಗ್ಗಿ ಪೂರ್ವ ತಂತ್ರಜ್ಞಾನ ಬಿ) ಸುಗ್ಗಿ ನಂತರದ ತಂತ್ರಜ್ಞಾನ ಸಿ) ಹಸಿರು ಕ್ರಾಂತಿ ಡಿ) ಸದಾ ಹಸಿರು ಕ್ರಾಂತಿ

8. ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ರಚನೆಯಾಗಿರುವ ಸಂಸ್ಥೆ

   ಎ) ಕೈಗಾರಿಕಾ ಸಂಸ್ಥೆ ಬಿ) ನಬಾರ್ಡ್ ಸಿ) ಸಲಹಾ ಸಂಸ್ಥೆ ಡಿ) ಜಿಲ್ಲಾ ಕೈಗಾರಿಕಾ ಕೇಂದ್ರ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **1X8=8**

9. ವಲ್ಲಭ ಭಾಯಿ ಪಟೇಲರನ್ನು "ಉಕ್ಕಿನ ಮನುಷ್ಯ" ಎಂದು ಏಕೆ ಕರೆಯುತ್ತಾರೆ?
10. ಮೊದಲ ಮಹಾಯುದ್ಧದ ಪರಿಣಾಮವಾಗಿ ಯುರೋಪಿನ ಭೂಪಟವೇ ಬದಲಾಯಿತು. ಸ್ಪಷ್ಟಪಡಿಸಿ
11. 20 ವರ್ಷಗಳ ಶಾಂತಿ, ಮೈತ್ರಿ, ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳಾವುವು?
12. ಬಾಲ್ಯ ವಿವಾಹ ಎಂದರೇನು?
13. ಕರ್ನಾಟಕದಲ್ಲಿ "ಕೂಲಿಯಿಂದ ಶಾಲೆಗೆ" ಕಾರ್ಯಕ್ರಮವನ್ನು ಏಕೆ ರೂಪಿಸಲಾಗಿದೆ?
14. ಜಲಾನಯನ ಪ್ರದೇಶಗಳಲ್ಲಿ ಅರಣ್ಯಗಳನ್ನು ಏಕೆ ಬೆಳೆಸಬೇಕು?
15. ಸಾರ್ವಜನಿಕ ವೆಚ್ಚ ಹೆಚ್ಚಳವಾಗಲು ಕಾರಣವೇನು?
16. ರಿಜ಼ರ್ವ್ ಬ್ಯಾಂಕನ್ನು ಬ್ಯಾಂಕುಗಳ ತಾಯಿ ಎಂದು ಕರೆಯುತ್ತಾರೆ. ಸ್ಪಷ್ಟೀಕರಿಸಿ

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **2X8=16**

17. ಭಾರತದ ಪ್ರಮುಖ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರನ್ನು ಹೆಸರಿಸಿ.
18. 1857 ರ ದಂಗೆಗೆ ಆಡಳಿತಾತ್ಮಕ ಅಂಶಗಳು ಕಾರಣವಾದವು. ಚರ್ಚಿಸಿ
19. ಜನಸಂಖ್ಯಾ ಸ್ಫೋಟದಿಂದುಂಟಾದ ಪರಿಣಾಮಗಳನ್ನು ವಿವರಿಸಿ.

    <u>ಅಥವಾ</u>

    ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ನೀಡಿದ ಘಟನೆಗಳಾವುವು?

20. ಅಸ್ಪೃಶ್ಯತೆಯನ್ನು ಸಾಮಾಜಿಕ ಪಿಡುಗು ಎಂದು ಏಕೆ ಕರೆಯುತ್ತಾರೆ?

**ಅಥವಾ**

ಪರಿಸರ ಮಾಲಿನ್ಯಕ್ಕೆ ಕಾರಣಗಳೇನು?

21. ಭಾರತದಲ್ಲಿ ಕಡಿಮೆ ಮಳೆ ಪಡೆಯುವ ಪ್ರದೇಶಗಳಾವುವು?

22. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಜಲ ಸಂಪನ್ಮೂಲವು ಪ್ರಮುಖ ಪಾತ್ರವಹಿಸುತ್ತದೆ. ಹೇಗೆ?

23. ಭಾರತದಲ್ಲಿನ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.

24. ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳಾವುವು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ. 3X9=27**

25. ಫ್ರೆಂಚರು ಮತ್ತು ಬ್ರಿಟಿಷರು ಅಧಿಕಾರ ಸ್ಥಾಪನೆಗಾಗಿ ಮೊದಲ ಕರ್ನಾಟಿಕ್ ಯುದ್ಧದಲ್ಲಿ ಹೋರಾಡಿದ ಬಗೆ ಹೇಗೆ?

**ಅಥವಾ**

ಬ್ರಿಟಿಷರ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯು ಹೇಗೆ ಸಹಾಯ ಮಾಡಿತು?

26. ದೋಂಡಿಯಾ ವಾಘ್‌ನು ಬ್ರಿಟಿಷರ ವಿರುದ್ಧ ಮಾಡಿದ ಹೋರಾಟವನ್ನು ವಿವರಿಸಿ.

27. ಆಂಗ್ಲ ಪ್ರಭುತ್ವದ ವಿರುದ್ಧದ ಹೋರಾಟದಲ್ಲಿ ಗಾಯಿಡಿನ್ ಲೂ ಪಾತ್ರವು ಮಹತ್ವಪೂರ್ಣವಾದುದು. ಹೇಗೆ?

28. ಯುನೆಸ್ಕೋದ ಕಾರ್ಯಗಳಾವುವು?

29. ಭಾರತದಲ್ಲಿ ಕಂಡುಬರುವ ಅರಣ್ಯಗಳ ಪ್ರಕಾರಗಳಾವುವು?

**ಅಥವಾ**

ಭಾರತದಲ್ಲಿ ತೋಟಗಾರಿಕೆಗೆ ಅಗತ್ಯವಾದ ಪೂರಕ ವಾತಾವರಣವಿದೆ. ವಿವರಿಸಿ

30. ಸಂಘಟಿತ ಕೆಲಸಗಾರರ ಲಕ್ಷಣಗಳಾವುವು?

31. ಪೂರ್ವ ಘಟ್ಟಗಳು ಹಾಗೂ ಪಶ್ಚಿಮ ಘಟ್ಟಗಳ ನಡುವಿನ ಭಿನ್ನತೆಗಳೇನು?

32. ಭಾರತದಲ್ಲಿನ ಗ್ರಾಮೀಣ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿ.

**ಅಥವಾ**

ನೀತಿ ಆಯೋಗದ ಧ್ಯೇಯ ಹಾಗೂ ಕಾರ್ಯಚಟುವಟಿಕೆಗಳಾವುವು?

33. ಬ್ಯಾಂಕುಗಳು ಸಲ್ಲಿಸುವ ಸೇವೆಗಳಾವುವು?

**ಅಥವಾ**

ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳನ್ನು ತಿಳಿಸಿ.

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ. 4X4=16**

34. ಬಕ್ಸಾರ್ ಕದನಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.

35. "ಖಾಯಂ ಜಮೀನ್ದಾರಿ ಪದ್ಧತಿಯು ರೈತರನ್ನು ಸಾದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ ಮಾಡಿತು". ಹೇಗೆ?

**ಅಥವಾ**

"ಬ್ರಿಟಿಷರ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಗಳಾದವು." ಈ ಹೇಳಿಕೆಯನ್ನು ಪರೀಕ್ಷಿಸಿ

36. ಸಾಕ್ಷರತೆಯನ್ನು ವೃದ್ಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

37. ಕಪ್ಪು ಮಣ್ಣು ಮತ್ತು ಕೆಂಪು ಮಣ್ಣುಗಳ ನಡುವಿನ ವ್ಯತ್ಯಾಸಗಳೇನು?

**VI. 38. ಭಾರತದ ನಕ್ಷೆಯನ್ನು ರಚಿಸಿ, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ. 1+4=5**

ಎ) ಅಹಮದಾಬಾದ್ ಬಿ) ಕೊಲ್ಕತ್ತಾ ಸಿ) ಅಮೃತಸರ ಡಿ) ಬಾಂಬೆ ಹೈ

********************